ಶ್ರೀ ಬಿ. ಪುಟ್ಟಸ್ವಾಮಯ್ಯ — ಅಧ್ಯಕ್ಷರೇ, ಮಂತ್ರಿಗಳ ಗೈರು ಹಾಜರಿಯ ಬಗ್ಗೆ ತಮ್ಮ ಅವಗಾಹನೆಗೆ ಆಗಾಗ್ಗೆ ತರುತ್ತಿದ್ದೇವೆ. ಇವರು ಇಷ್ಟು ತಾತ್ಸಾರದಿಂದ ಈ ಸಭೆಯನ್ನು ನೋಡುವುದನ್ನು ತಾವು ಹೇಗೆ ಸರಿಪಡಿಸುತ್ತೀರಿ ಎನ್ನುವುದನ್ನು ತಮಗೆ ಬಿಟ್ಟ ವಿಷಯ. ಈ ಕೇಸಿನ ಬಗ್ಗೆ ಬಹಳ ಅಮೂಲ್ಯವಾದ ವಿಚಾರಗಳನ್ನು ಹೇಳ ಬೇಕೆಂದಿದೆ. ಆದರೆ ಮೊದಲನೇ ಮಂತ್ರಿಗಳೇ ಮರ್ಡರ್ ಕೇಸಿಗೆ ಗೈರು ಹಾಜರಾಗಿದ್ದಾರೆ. ಕೆಲವು ಪ್ರಾಮುಖ್ಯವಾದ ವಿಚಾರಗಳನ್ನು ಮುಖ್ಯ ಮಂತ್ರಿಗಳ ಹತ್ತಿರ ಪ್ರಸ್ತಾಪ ಮಾಡಬೇಕಾಗಿದೆ. ಬೆಳಿಗ್ಗೆ ಎಂಟೂವರೆ ಗಂಟೆಯಿಂದ ಅವರು ಪತ್ತೆ ಇಲ್ಲ. ಬಹಳ ಅಮೂಲ್ಯವಾದ ವಿಷಯವನ್ನು ಅವರ ಹತ್ತಿರ ಸಂಭಾಷಣೆ ಮಾಡಲು ಹುಡುಕುತ್ತಿದ್ದೇನೆ. ರಾಜ್ಯದಲ್ಲೆಲ್ಲಾ ಹುಡುಕುತ್ತಿದ್ದೇನೆ. ಸಿಕ್ಕಲಿಲ್ಲ,

ಶ್ರೀ ಎಸ್. ಎಂ. ಕೃಷ್ಣ .— ಅವರು ರಾಜ್ಯದಲ್ಲಿ ಎಲ್ಲೆಲ್ಲೂ ಹುಡುಕಬೇಕಾಗಿರಲಿಲ್ಲ. ನನ್ನನ್ನು ಕೇಳಿದ್ದರೆ ನಾನು ಹೇಳುತ್ತಿದ್ದೆ.

ವಿಧಾನ ಪರಿಷತ್ತು ಇಂದು ಬೆಳಗಿನಿಂದ ನಡೆಯುತ್ತಿದೆ. ಅವರು ಅಲ್ಲಿ ಕೆಲಸವನ್ನು ಮುಂಗಿಸಿ ಕೊಂಡು ಇನ್ನು ಐದು ನಿಮಿಷಗಳಲ್ಲಿ ಇಲ್ಲಿಗೆ ಬರುತ್ತಾರೆ,

*(i) Re :— assault on the Head Mistress of K.P. S. Girls School on 14th August 1974*

2–00 P.M.

SRI KAGODU THIMMAPPA (Sagar),— I call the attention of the Hon. Minister for Education to the assault of the Headmistress at Magadi Girls High School.

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ವಿದ್ಯಾಶಾಖೆಯ ಮಂತ್ರಿಗಳು):—ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಗಮನ ಸೆಳೆಯುವ ಸೂಚನೆಯಂನ್ನು ಏನು ಕಳುಹಿಸಿದ್ದಾರೋ ಅದಕ್ಕೆ ಸಂಬಂಧಪಟ್ಟ ಸಮಾಚಾರವನ್ನು ನಾನು ತರಿಸಿದ್ದೇನೆ. ಅದು ಆಜೆಂಡಾದಲ್ಲಿ ಇಲ್ಲದೇ ಇರುವುದರಿಂದ ನಾನು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಬದಲು ವಿಷಯ ಬೇಕಾದರೆ ಹೇಳುತ್ತೇನೆ. ಮಾಗಡಿ ನಾಗರೀಕರಿಂದ ಇದರ ಬಗ್ಗೆ ಒಂದು ಮನವಿ ಬಂದಿದ್ದರ ಮೇಲೆ ನಮ್ಮ ಜಾಯಿಂಟ್ ಡೈರಕ್ಟರನ್ನು ಅಲ್ಲಿಗೆ ಕಳುಹಿಸಿ ಈಗಾಗಲೇ ತನಿಖೆ ಮಾಡಿದ್ದೇನೆ. ಅಲ್ಲಿ ಅನೇಕ ಲೋಪದೋಷಗಳು ಕಂಡುಬಂದಿದೆ. ಯಾರು ಈ ವಿದ್ಯಾಸಂಸ್ಥೆಯನ್ನು ನಡೆಸುತ್ತಿದ್ದಾರೋ ಅವರಿಗೆ ವಿದ್ಯಾಸಂಸ್ಥೆಯನ್ನು ನಡೆಸತಕ್ಕಂಥಾದ್ದರಲ್ಲಿ ಅಭಿರುಚಿ ಇಲ್ಲ. ಹಣ ಮಾಡತಕ್ಕಂಥಾದ್ದೇ ಅವರ ಅಭಿರುಚಿ. ಅಲ್ಲಿ ತಮ್ಮ ಸಂಬಂಧಿಗಳಿಗೆ ಮಾತ್ರ ಕೆಲಸ ಕೊಟ್ಟಿರತಕ್ಕದ್ದು. ಮತ್ತು ಅರ್ಹತೆ ಇಲ್ಲದೇ ಇರುವವರನ್ನು ಕೆಲಸಕ್ಕೆ ತೆಗೆದುಕೊಂಡಿರತಕ್ಕದ್ದು ಕಂಡುಬಂದಿದೆ. ಆಲ್ಲದೆ ಒಂದು ಸ್ಕೂಲನ್ನು ನಡೆಸಬೇಕಾದರೆ, ಆ ಸ್ಕೂಲಿಗೆ ಏನು ಅನುಕೂಲಗಳನ್ನು ಮಾಡಿಕೊಡಬೇಕೋ ಅಷ್ಟು ಅನುಕೂಲ ಗಳನ್ನು ಮಾಡಿಕೊಡದೇ ಇರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆ. ಅದರಲ್ಲಿ ಒಬ್ಬ ಆಟೆಂಡರನ್ನು ನೇಮಿಸಿಕೊಂಡಿದ್ದಾರೆ. ತನಿಖೆ ಮಾಡಿದ್ದರಲ್ಲಿ ಹೆಡ್ ಮಿಸ್ಟ್ರೆಸ್‌ಗೆ ತ್ರೆಟನ್ ಮಾಡುತ್ತೇವೆ ಎಂದು ಹೇಳಿದರೇ ಹೊರತು ಅಸಾಲ್ಟ್ ಮಾಡಿರತಕ್ಕಂಥಾದ್ದನ್ನು ಹೆಡ್ ಮಿಸ್ಟ್ರೆಸ್ಸೇ ಒಪ್ಪಿಕೊಂಡಿಲ್ಲ. ಈಗಾಗಲೇ ನಮ್ಮ ಇಲಾಖಾ ಅಧಿಕಾರಿಗಳು ಪೋಲೀಸರನ್ನು ಕಂಟಾಕ್ಟ್‌ಮಾಡಿ ಅವರಿಗೆ ಸರಿಯಾದಂತ ರಕ್ಷಣೆಯನ್ನು ಕೊಡಬೇಕು ಎಂದು ತಿಳಿಸಿದ್ದಾರೆ. ಇದರ ಜೊತೆಗೆ ತೆಗೆದುಕೊಂಡಿರತಕ್ಕ ಆಟೆಂಡರಿಗೆ ಕ್ವಾಲಿಫಿಕೇಷನ್ ಇಲ್ಲ. ಆತ ತನಿಖೆ ಕಾಲದಲ್ಲಿ ಎಸ್.ಎಸ್.ಎಲ್.ಸಿ. ಬೋಗಸ್ ಮಾರ್ಕ್ಸ್ ಕಾರ್ಡನ್ನು ಪ್ರೊಡ್ಯೂಸ್ ಮಾಡಿದ್ದಾನೆ. ಕನ್ನಡದಲ್ಲಿ ಡಿಕ್ಟೇಷನ್ ಕೊಟ್ಟರೆ, ಒಂದು ವಾಕ್ಯ ಕೂಡ ಸರಿಯಾಗಿ ಬರಯುವುದಕ್ಕೆ ಆಗದೇ ಇರತಕ್ಕ ಅಣ್ಣನ ಮಗನನ್ನು ಆಟೆಂಡರನ್ನಾಗಿ ತೆಗೆದು ಕೊಂಡಿದ್ದಾರೆ ಆತನಿಗೆ ಲ್ಯಾಬೊರೇಟರಿಯಲ್ಲಿ ಕೆಮಿಕಲ್ಸ್‌ನ್ನು ಯಾವರೀತಿ ಉಪಯೋಗಿಸಬೇಕು ಎನ್ನುವುದೂ ಕೂಡ ಗೊತ್ತಿಲ್ಲ. ಎಸ್.ಎಸ್.ಎಲ್.ಸಿ. ಬೋಗಸ್ ಮಾರ್ಕ್ಸ್ ಕಾರ್ಡನ್ನು ಕೊಟ್ಟಿದ್ದೇನೆ ಎಂದು ಆತ ಒಪ್ಪಿಕೊಂಡಿದ್ದಾನೆ. ಇದರ ಜೊತೆಗೆ ಪ್ರಭಾವತಿ ಎಂಬ ಹೆಣ್ಣು ಮಗಳನ್ನು ಕ್ಲಾರ್ಕಾಗಿ ತೆಗೆದುಕೊಂಡಿದ್ದಾರೆ. ಆಕೆ ಕೂಡ ಅವರ ಸಂಬಂಧಿ ಮತ್ತು ಶ್ರೀ ಬಸವರಾಜ ಎಂಬು ಶ್ರೀ ವೀರಪ್ಪ ಎಂಬುವರನ್ನು ಪೀವನ್ ಆಗಿ ತೆಗೆದು ಕೊಂಡಿದ್ದಾರೆ. ಆದುದರಿಂದ ಈಗಾಗಲೇ ಅದಕ್ಕೆ ಸೂಕ್ತವಾದಂಥ ಕಾರ್ಯಕ್ರಮವನ್ನು ಸರಕಾರದವರಂ ತೆಗೆದುಕೊಳ್ಳುತ್ತಿದ್ದಾರೆ. ಮತ್ತು ಇದಕ್ಕೆ ಕ್ರಿಮಿನಲ್ ಪ್ರಾಸಿಕ್ಯೂಷನ್ ಪ್ರಕಾರ ಪ್ರೋಕಾಸ್ ನೋಟೀಸ್

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ಕೂಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಮತ್ತು ಇದರ ಬಗ್ಗೆ ಸೂಕ್ತವಾದಂಥ ಕಾರ್ಯ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಈ ಸಂದರ್ಭದಲ್ಲಿ ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ ಇಂತಹ ಶಾಲೆಗಳಿಗೆ ರೆಕಗ್‌ನಿಷನ್ ಕೂಡ ಏಕೆ ಎತ್‌ಡ್ರಾ ಮಾಡಬಾರದು ಎನ್ನುವುದನ್ನು ಕೂಡ ಪರಿಶೀಲಿಸು ತ್ತಿದ್ದೇವೆ. ಮತ್ತು ಅಲ್ಲಿ ಇನ್ನೂ ಎರಡು ಸ್ಕೂಲುಗಳಿವೆ ಆ ಸ್ಕೂಲುಗಳಿಗೆ ಇಲ್ಲಿ ಇರತಕ್ಕಂಥ ವಿದ್ಯಾರ್ಥಿ ಗಳನ್ನು ವರ್ಗಾಯಿಸಿ, ಆ ವಿದ್ಯಾರ್ಥಿಗಳಿಗೆ ಏನೂ ತೊಂದರೆ ಆಗದೇ ಇರುವ ರೀತಿಯಲ್ಲಿ ಅನುಕೂಲ ಗಳನ್ನು ಮಾಡುತ್ತೇವೆ ಎಂದು ಮಾನ್ಯ ಕಾಗೋಡು ತಿಮ್ಮಪ್ಪನವರು ತಂದಿರತಕ್ಕ ಗಮನ ಸೆಳೆಯುವ ಸೂಚನೆಗೆ ಈಗ ಬಂದಿರತಕ್ಕಂಥ ವರದಿಯ ಆಧಾರದ ಮೇಲೆ ಇಷ್ಟು ವಿಷಯಗಳನ್ನು ತಿಳಿಸಿದ್ದೇನೆ.

(*ii*) *Re:— Murder of Kumari Susheelamma at Kattaya Village Hassan Taluk.*

SRI K. H. HANUME GOWDA (Hassan):—I call the attention of the Chief Minister to the murder of Kumari Shsheelamma, a Primary School Teacher at Kattaya Village, Hessan Taluk on 29th July 1974.

SRI D. DEVARAJ URS (Chief Minister):—I make the following statement.

On 29th July 1974 at 9 p.m a written report was received from Sri A, R. Keshava Murthy, a Primary School Teacher and a resident of Agile Village, Hassan Taluk to the eff ect–that his second daughter Kum. Sushe lamma aged 19 years who has working as a teacher in the Higher Primary School at Kattaya and used to go by bus in the morning to Kattaya and return in the evening by 6 p.m bus. She used to get into and alight from the bus at Agile cross road, In case of her not reaching home by 6 p.m., he used to go and wait in the main road and escort her home. On 29th July 1974 as usual she had left the home at about 9–30 a.m. but did not return home till 6 p.m. Hence he and one Shesappa went to the main road and on reaching the culvert near the main road, he found the dead body of his daughter lying inside the culvert close to the drain with a severe bleeding injury on the head. He also found her belongings i e., a Plastic wire bag, tiffin box, note books, kerchief, fountain pen, comb etc., strewn all round. A gold rope pattern chain with dollar (pendant) and a pair of gold ear-rings studded with stones worn by the deceased were missing.

On this report a case in Hassan Rural Police Station Cr. No. 81/74 /s 302 I.P.C. was registered and investigation taken up.

On the forehead of the deceased a lacerated injury about 6" in length with deep cut and profuse bleeding all over the face, 3 or 4 dark patches on the front of the neck indicating squeezing of the neck and some abrasions on the left side of the leg were found.

During the investigation the following witnesses were examined:

1. Sri. A.R. Keshava Murthy, Father of the Deceased.
2. Smt. Kamalamma, mother of the deceased.